ಕರ್ನಾಟಕ ವಿಧಾನ ಸಭೆ

ಸೋಮವಾರ 17ನೇ ಫೆಬ್ರವರಿ 1997 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು:- ಶ್ರೀ ರಮೇಶ್‌ಕುಮಾರ್ ಅವರು ಪೀಠವನ್ನು ಅಲಂಕರಿಸಿದ್ದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ಅ) ಕೃಷ್ಣಾ ನದಿ ನೀರಿನ ಹಂಚಿಕೆ ಬಗ್ಗೆ ಮುಖ್ಯಮಂತ್ರಿಗಳ ಸಭೆ ಕುರಿತು.

(ಅಧ್ಯಕ್ಷರು ಅಧ್ಯಕ್ಷ ಪೀಠದಲ್ಲಿದ್ದರು)

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ತಮಗೆ ಒಂದು ನೋಟೀಸು ಕಳುಹಿಸಿಕೊಟ್ಟಿದ್ದೇನೆ. ಆಲ್ಮಟ್ಟಿ ಬಹಳ ಮುಖ್ಯವಾದ ವಿಷಯ. ಆಲ್ಮಟ್ಟಿ ವಿಷಯವಾಗಿ ಮಾತುಕತೆಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಶ್ರೀ ಚಂದ್ರಬಾಬು ನಾಯ್ಡು ಅವರನ್ನು ಮಾನ್ಯ ಜೋತಿಬಸು ಅವರು ಕರೆದಿದ್ದಾರೆ ಎನ್ನತಕ್ಕಂಥ ವರದಿಯನ್ನು ನಾನು ಈಗಾಗಲೇ ಪತ್ರಿಕೆಗಳಲ್ಲಿ ನೋಡಿದ್ದೇನೆ. ಮತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಜೋತಿಬಸು ಅವರು ಕರೆದಿರುವ ಮಾತುಕತೆಗೆ ನಾನು ಹೋಗುತ್ತೇನೆಂದು ಹೇಳಿರುವುದು ಕೂಡ ಪತ್ರಿಕೆಗಳಲ್ಲಿ ಬಂದಿದೆ. ಮಾನ್ಯ ಜೋತಿಬಸು ಅವರು ಕರೆದಿರುವ ಸಭೆಗೆ ಇಬ್ಬರೂ ಮುಖ್ಯಮಂತ್ರಿಗಳು ಹೋಗುತ್ತಿದ್ದಾರೆ. ಇದರ ಬಗ್ಗೆ ಏನು ಚರ್ಚೆ ನಡೆದಿದೆ ಎನ್ನತಕ್ಕಂಥಾದ್ದು ಹೇಳಬೇಕು....

ಅಧ್ಯಕ್ಷರು:- ತಾವು ಕಳುಹಿಸಿದ ನೋಟಿಸು ಬಂದಿದೆ. ಮಾನ್ಯ ವಾಟಾಳ್ ನಾಗರಾಜ್ ಅವರು ಬಂದು ಹೇಳಿದ್ದಾರೆ. ಈಗ ಪ್ರಶ್ನೋತ್ತರ ಮುಗಿಯಲಿ. ಅಷ್ಟರಲ್ಲಿ ನಾನೂ ಸಹ ಏನು ಮಾಡಬಹುದು ಎನ್ನುವ ಬಗ್ಗೆ ಆಲೋಚನೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈ ವಿಷಯಕ್ಕೆ ನಾವು ಏತಕ್ಕೆ ಇಷ್ಟು ಪ್ರಾಮುಖ್ಯತೆ ಕೊಡುತ್ತಿದ್ದೇವೆ ಅಂದರೆ ಮಾನ್ಯ ಜೋತಿಬಸು ಅವರು ಕರೆಯುವ ಮಾತುಕತೆಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಹೋಗುತ್ತಿದ್ದಾರೆ. ಅವರಿಗೆ ಏನೂ ಅಥಾರಿಟಿ ಇಲ್ಲದಿದ್ದರೂ ಸಹ ಅವರು ಕರೆಯಿಸುತ್ತಿದ್ದಾರೆ, ಇವರು ಹೋಗುತ್ತಿದ್ದಾರೆ...

ಅಧ್ಯಕ್ಷರು:- ಈ ವಿಷಯ ಬಹಳ ಪ್ರಾಮುಖ್ಯವಾದುದು ಎನ್ನುವುದು ನನಗೂ ಗೊತ್ತಿದೆ. ನಾನು ಒಪ್ಪುತ್ತೇನೆ, ಆದರೆ ಪ್ರಶ್ನೋತ್ತರ ಮುಗಿಯಲಿ. ನಂತರ ನಾನು ಈ ವಿಷಯವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವು ತೆಗೆದುಕೊಳ್ಳುತ್ತೇನೆಂದರೆ ಸರಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ ಸರ್ಕಾರ ಕಾವೇರಿ ಮತ್ತು ಕೃಷ್ಣಾ ನದಿ ವಿಷಯದ ಬಗ್ಗೆ ಈ ಸಭೆ ಸೇರಿದ ತಕ್ಷಣ ಒಂದು ಹೇಳಿಕೆಯನ್ನು ಕೊಡಬೇಕಾಗಿತ್ತು. ಅಂದರೆ 11ನೇ ತಾರೀಖು ಅಥವಾ 12ನೇ ತಾರೀಖು ಹೇಳಿಕೆ ಕೊಡಬೇಕಾಗಿತ್ತು. ಕಾವೇರಿ ವಿಷಯದ ಬಗ್ಗೆ ಸರ್ಕಾರ ತಮಿಳುನಾಡು ಜೊತೆ 5 ಸಾರಿ ಮಾತುಕತೆ ನಡೆಸಿ ಕೊನೆಗೆ ವಿಫಲವಾಯಿತು. ಅದೇ ರೀತಿ ಸರ್ಕಾರ ಆಲಮಟ್ಟಿ ವಿಷಯದಲ್ಲಿಯೂ ಸಹ ಗಮನ ಕೊಡುತ್ತಿಲ್ಲ.

ಸರ್ಕಾರದ ಬಗ್ಗೆ ನಮಗೆ ಇರುವ ನಂಬಿಕೆ ಹೋಗುತ್ತಿದೆ. ಈ ಸರ್ಕಾರ ಎಲ್ಲಾ ವಿರೋಧಪಕ್ಷದವರನ್ನು ಕಡೆಗಣಿಸಿದ್ದಾರೆ. ನಾಗೇಗೌಡರ ಬಗ್ಗೆ ಒಂದು ಕಡೆ ಪ್ರೀತಿ ಮತ್ತೊಂದು ಕಡೆ ಅವರು ಮಾಡತಕ್ಕಂಥ ವಿಚಾರದ ಬಗ್ಗೆ ಅಪಾರವಾದ ವಿರೋಧ ಇದೆ. ಆದ್ದರಿಂದ ಇದನ್ನು ನಾನು ವಿರೋಧಿಸಿ ಧರಣಿ ಮಾಡುತ್ತೇನೆ. ಸರ್ಕಾರ ಈ ಬಗ್ಗೆ ಒಂದು ಹೇಳಿಕೆಯನ್ನು ಯಾವಾಗ ಕೊಡುತ್ತಾರೆ?

(ಮಾನ್ಯ ವಾಟಾಳ್ ನಾಗರಾಜ್ ಅವರು ಧರಣಿ ಮಾಡಲು ಧಾವಿಸಿದರು)

ಅಧ್ಯಕ್ಷರು:- ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಅತ್ಯಂತ ಹಿರಿಯ ಸದಸ್ಯರು. ಪ್ರಶ್ನೋತ್ತರ ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ತಾವು ಧರಣಿ ಕೂರುವುದು ಸರಿಹೋಗುವುದಿಲ್ಲ. ನಾನು ತಮ್ಮಲ್ಲಿ ಇಷ್ಟೇ ಅರಿಕೆ ಮಾಡಿಕೊಳ್ಳುತ್ತೇನೆ, ಪ್ರಶ್ನೋತ್ತರ ಮುಗಿಯಲಿ. ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಎಲ್ಲಾ ವಿರೋಧಪಕ್ಷದವರಿಗೂ ಅನುಮತಿ ಕೊಡುತ್ತೇನೆ. ಅಷ್ಟರಲ್ಲಿ ಸರ್ಕಾರ ಸಹ ಒಂದು ಹೇಳಿಕೆ ಮಾಡಬಹುದು. ನಾನು ತಮ್ಮಲ್ಲಿ ಕೈ ಮುಗಿದು ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಹಿರಿಯ ಸದಸ್ಯರು. ಕಿರಿಯ ಸದಸ್ಯರಿಗೆ ಮಾರ್ಗದರ್ಶಕವಾಗಿರಬೇಕು. ನಾನು ತಮ್ಮ ತೀವ್ರತೆಯನ್ನು, ತಮ್ಮ ಮನಸ್ಸಿನಲ್ಲಿರತಕ್ಕಂತಹ ಭಾವನೆಗೆ ಖಂಡಿತವಾಗಿ ಸ್ಪಂದಿಸುತ್ತೇನೆ. ದಯಮಾಡಿ ತಾವು ತಮ್ಮ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಅಧ್ಯಕ್ಷರೇ ತಾವು ಯಾವಾಗ ಅನುಮತಿ ಕೊಡುತ್ತೀರೋ ಆಗ ಕೃಷ್ಣಾ ಮತ್ತು ಕಾವೇರಿ ವಿಷಯದ ಬಗ್ಗೆ ಒಂದು ಹೇಳಿಕೆಯನ್ನು ಕೊಡುವುದಕ್ಕೆ ತಯಾರಾಗಿದ್ದೇನೆ.

ಅಧ್ಯಕ್ಷರು:- ತಮ್ಮ ಭಾವನೆಗೆ ಅವರು ಸ್ಪಂದಿಸುತ್ತಿದ್ದಾರೆ. ಈಗ ಪ್ರಶ್ನೋತ್ತರ ಆಗಲಿ. ಆಮೇಲೆ ತೀರ್ಮಾನ ಮಾಡೋಣ.